ಎಯ್ಡೆಡ್ ಎಲ್.ಪಿ. ಸ್ಕೂಲ್ ಆಗಿ ಪರಿವರ್ತನೆ ಹೊಂದಿದ್ದು ಅವರ ಮನೆಯಿಂದ ಸ್ವಲ್ಪ ದೂರದಲ್ಲಿ ಸ್ವಂತವಾದ ಕಟ್ಟಡಕ್ಕೆ ಸ್ಥಳಾಂತರವಾಗಿತ್ತು. ಉದ್ದಕ್ಕೆ ಕಟ್ಟಲಾದ ಎರಡು ಕಟ್ಟಡಗಳು. ಒಂದರಲ್ಲಿ ಹೆಡ್ ಮಾಸ್ಟರ ಕೋಣೆ, ಆಫೀಸು, ಟೀಚರ್‌ಗಳ ಕೋಣೆಯಿದ್ದು ಹಿಂಬದಿಗೆ ಇಳಿಸಿ ಕಟ್ಟಿದ್ದ ಕೋಣೆ ಗಂಜಿ ಕೋಣೆಯಾಗಿತ್ತು. ಇನ್ನೊಂದರಲ್ಲಿ ತರಗತಿ ನಡೆಯುತ್ತಿತ್ತು. ಸಜಪೆಯ ಸುತ್ತುಮುತ್ತಲ ಮಕ್ಕಳ ಸ್ವಂತ ಶಾಲೆಯಾಗಿ ಮಯ್ಯರ ಸಂಸ್ಕೃತ ಶಾಲೆ ಬೆಳೆದಿದ್ದು ದೇವಕಿಯ ಗಂಡ ಅಲ್ಲಿ ಹೆಡ್ ಮಾಸ್ತರಾಗಿದ್ದರು. ರಮೇಶನಿಗೆ ಈಗಾಗಲೇ ಐದು ತುಂಬಿ ಆರಕ್ಕೆ ಬಿದ್ದಿದ್ದು ಅವನನ್ನು ಶಾಲೆಗೆ ಸೇರಿಸಲು ಅಂತಕ್ಕ ಗೋಪಾಲಣ್ಣನಲ್ಲಿ ಹೇಳಿದ್ದರೂ, ಕೆಲಸದ ಗಡಿಬಿಡಿಯಿಂದ ಮರೆತಿದ್ದ ಗೋಪಾಲಣ್ಣ ಬಿತ್ತನೆ ಮುಗಿದ ಕೂಡಲೇ ಬೊಂಬಾಯಿಗೆ ಹೋಗಿ ಆಗಿತ್ತು. ಜೂನ್ ಅರ್ಧಕ್ಕೆ ಬಂದಿತ್ತು, ಶಾಲೆಗೆ ಹೋಗಬೇಕೆಂಬ ಮಗನ ಆಶೆಯೋ, ಅಥವಾ ಮಾಸ್ತರಲ್ಲಿ ಒಮ್ಮೆ ಮಾತನಾಡಬೇಕೆಂಬ ಒಳಮನಸ್ಸಿನ ಬಯಕೆಯೋ, ಗೋಪಾಲಣ್ಣನನ್ನು ಕಾಯದೆ ತಾನೇ ಮುಂದುವರಿಯುವ ಧೈರ್ಯವನ್ನು ಅಕ್ಕುವಿನಲ್ಲಿ ಹುಟ್ಟಿಸಿತ್ತು. ಮೂರು, ನಾಲಕ್ಕು ದಿನ ಮೀನಾಮೇಷ ಎಣಿಸಿ ಕೊನೆಗೊಂದು ಶನಿವಾರ ಸಜಪೆ ಸಂತೆಗೆ ಮಾಸ್ತರು ಹೋಗುವುದನ್ನು ನೋಡಿದವಳು ಸಂಜೆ ಹೊತ್ತಿಗೆ ಅವರು ಬರುವ ದಾರಿಯಲ್ಲಿ ಕಾದು ನಿಂತಿದ್ದಳು. ತಿರುವಿನಲ್ಲಿ ಅಚಾನಕ್ ಎದುರಾದವಳನ್ನು ನೋಡಿ ಮಾಸ್ಟರ್ ಒಂದಿಷ್ಟು ಅಚ್ಚರಿಯ ನಗು ಬೀರಿದ್ದರು. ಡವಗುಟ್ಟುತ್ತಿದ್ದ ಎದೆಯ ಏರು ಬಡಿತದೊಂದಿಗೆ ಕೈ ಜೋಡಿಸಿದವಳು, "ನಾನು ಅಕ್ಕು" ಎಂದು ತೊದಲಿದ್ದಳು. "ನಂಗೆ ಗೊತ್ತು. ನಿನ್ನನ್ನು ಆಗಾಗ ಕಂಡಿದ್ದೇನೆ" ಮಾಸ್ಟರ ಮುಂಗುರುಳು ಹಣೆಯ ಮೇಲೆ ಚೆಲ್ಲಾಡಿದವು. ಆ ಜೊಂಪೆಗೂದಲನ್ನು ಒಮ್ಮೆ ಮುಟ್ಟಬೇಕೆಂಬ ಅದಮ್ಯವಾದ ಬಯಕೆಯನ್ನು ನಿಯಂತ್ರಿಸಿಕೊಳ್ಳುತ್ತಾ, "ನನ್ನ ಮಗನನ್ನು ಶಾಲೆಗೆ ಸೇರಿಸಬೇಕಿತ್ತು" ಎಂದಿದ್ದಳು ಅಕ್ಕು. ಮಾಸ್ತರ ಕಣ್ಣುಗಳು ಒಂದಿಷ್ಟು ಕಿರಿದಾಗಿದ್ದುವು. ಹಣೆಯ ಅಂಚಲ್ಲಿ ಮೂಡಿದ ಬೆವರ ಹನಿಗಳನ್ನು ಎಡಗೈಯಿಂದ ತೊಡೆಯುತ್ತಾ, "ಸರಿ. ಬರುವ ಶನಿವಾರ ಶಾಲೆಗೆ ಬಾ" ಎಂದು ಎರಡು ಹೆಜ್ಜೆ ಮುನ್ನಡೆದವರು ಹೊರಳಿನಿಂತು, "ಮಗುವನ್ನು ತರಬೇಕೆಂದಿಲ್ಲ. ಒಬ್ಬಳೇ ಬಂದರೆ ಸಾಕು" ಎಂದವರೇ ದಾಪುಗಾಲಿಟ್ಟು ಮುನ್ನಡೆದಿದ್ದರು. ಅವರು ತಿರುವು ದಾಟುವ ವರೆಗೆ ಅಲ್ಲೇ ನಿಂತಿದ್ದಳು ಅಕ್ಕು.



ಮುಂದಿನ ಒಂದು ವಾರ ಹೇಗೆ ಕಳೆಯಿತೆಂದೇ ಅಕ್ಕುವಿಗೆ ತಿಳಿದಿರಲಿಲ್ಲ. ಸರಿಯಾಗಿ ಊಟ, ತಿಂಡಿ ಸೇರದೆ, ಮನಸ್ಸಿಟ್ಟು ಕೆಲಸ ಮಾಡಲಾಗದೆ, ಅಂತಕ್ಕನ ಬೈಗುಳವನ್ನೂ ತಿಂದವಳು ಶುಕ್ರವಾರ ಸಂಜೆಯೇ ಅಂತಕ್ಕನಲ್ಲಿ ಮಾರನೆ ದಿನ ಸಜಪೆ ಸಂತೆಗೆ ಬರುವ ನಾಟಿ ವೈದ್ಯರಿಂದ ತನ್ನ ಮುಟ್ಟಿನ ಹೊಟ್ಟೆನೋವಿಗೆ ಮದ್ದು ತರಲು ಹೋಗಲಿದೆಯೆಂದು ನೆವ ಹೇಳಿ ರಜೆಯನ್ನೂ ಪಡೆದಿದ್ದಳು. ಶನಿವಾರ ಅಮ್ಮನಲ್ಲೂ ಅದೇ ನೆವವನ್ನು ಮುಂದಿಟ್ಟವಳು ತನ್ನ ಮೆಚ್ಚಿನ ಗುಲಾಬಿ ಬಣ್ಣದ ಸೀರೆಯುಟ್ಟು ಅಂತಕ್ಕನಲ್ಲಿಂದ ಕೊಯ್ದು ತಂದು ಬೈರಾಸಿನಲ್ಲಿ ಸುತ್ತಿಟ್ಟಿದ್ದ ಜಾಜಿ ದಂಡೆಯನ್ನೂ ಮುಡಿಗೇರಿಸಿ ಯಾರಿಗೂ ಸಂಶಯ ಬಾರದಂತೆ ಶಾಲೆಯ ದಾರಿ ಹಿಡಿದಿದ್ದಳು. ಬಡಿಯುವ ಎದೆ, ನಡುಗುವ ಮೈಯ್ಯೊಂದಿಗೆ ಇವಳು ಶಾಲೆಯ ಅಂಗಳ ಪ್ರವೇಶಿಸುವಾಗ ಮಾಸ್ಟರು ಶಾಲೆಯ ವರಾಂಡದಲ್ಲಿ ಬಿದ್ದಿದ್ದ ಆಡಿನ ಹಿಕ್ಕೆಯನ್ನು ಗುಡಿಸುವುದರಲ್ಲಿದ್ದರು. ಸುತ್ತು ಗೋಡೆ ಇಲ್ಲದ ಶಾಲೆಯ ವರಾಂಡ ಅಲ್ಲೇ ಪಕ್ಕದ ಹಿತ್ತಿಲಲ್ಲಿದ್ದ ಎಡ್ಡಿ ಸೋಜರ ಆಡುಗಳಿಗೆ ಕಾಯಂ ಮಲಗು ಮನೆಯಾಗಿದ್ದು ಪ್ರತಿದಿನ ಬೆಳಗ್ಗೆ ವರಾಂಡದಲ್ಲಿ ತುಂಬಿದ್ದ ಆಡಿನ ಹಿಕ್ಕೆಯನ್ನು ಗುಡಿಸುವುದೇ ಒಂದು ಕೆಲಸವಾಗುತ್ತಿತ್ತು. ಇವಳ ನಿರೀಕ್ಷೆಯಲ್ಲೇ ಇದ್ದ ಮಾಸ್ತರು, "ಅಕ್ಕು, ಇದಿಷ್ಟು ಗುಡಿಸಿಬಿಡುತ್ತೀಯ?" ಅಂದವರೇ ಹಿಡಿಸೂಡಿಯನ್ನು ಇವಳ ಕೈಗಿತ್ತಿದ್ದರು.